(ಶ್ರೀ ಹೆಚ್. ಡಿ. ದೇವೇಗೌಡ)

ರೂಲಿಂಗ್ ಕೊಡುತ್ತಾರೆ ಎಂಬುದು ನನ್ನ ಮನಸ್ಸಿನಲ್ಲಿತ್ತು. ನಾನು ಹಾಗೆ ತಿಳಿದುಕೊಂಡಿದ್ದೆ ಅದರೆ ಇಂಥ ವಿಷಯದಲ್ಲಿ ಆ ಬಿಜಿನೆಸ್ ಅಡ್ವೈಜರಿ ಸಮಿತಿಯವರಿಗೆ ಒಂದು ರಕ್ಷಣೆಯನ್ನು ಕೊಡುವುದಕ್ಕೆ ಕಾನೂನಲ್ಲಿ ಅವಕಾಶವಿರುವುದಿಲ್ಲ. ಇದರ ಬಗ್ಗೆ ಹೆಚ್ಚಿನ ವಿವರಗಳು ನನಗೆ ಸಂಬಂಧವೂ ಇಲ್ಲ. ಲೈಸೆನ್ಸ್ ಇಲ್ಲದೆ ರಾಮನಗರದಲ್ಲಿ ಮತ್ತು ಇನ್ನೂ ಕೆಲವು ಜಾಗಗಳಲ್ಲಿ ಸೀಪೆಎಣ್ಣೆ ಮಾರಾಟ ಮಾಡುತ್ತಿದ್ದಾರೆಂದು ಮಂತ್ರಿಗಳು ಮಾಡಿದ ಒಂದು ಹೇಳಿಕೆಯ ಮೇಲೆ ಶ್ರೀ ವಾಟಾಳರವರು ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ಇಲ್ಲಿ ಸರ್ಕಾರದವರು ಮಾಡಿರತಕ್ಕ ತಪ್ಪು ಸ್ಪಷ್ಟವಾಗಿ ಕಾಣುತ್ತಿದೆ. ಬಿಜಿನೆಸ್ ಅಡ್ವೈಜರಿ ಕಮಿಟಿಯವರು ಇ ನ್ನು ಏಕೆ ಕೈ ಬಿಟ್ಟರೋ ತಿಳಿಯದು. ಅದಕ್ಕೂ ನನಗೂ ಸಂಬಂಧವಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ ಆ ಮೂರ್ತಿ ಎನ್ನತಕ್ಕವರು ರಾಮನಗರ, ಚನ್ನಪಟ್ಟಣ ಇತ್ಯಾದಿ ತಾಲ್ಲೂಕುಗಳಲ್ಲಿ ಲೈಸೆನ್ಸ್ ಇಲ್ಲದೆ ಎಣ್ಣೆ ಮಾರಾಟ ಮಾಡುತ್ತಿದ್ದ ವಿಷಯ ಚರ್ಚೆಯಾಗಬೇಕು. ಇದೊಂದನ್ನೇ ಅಲ್ಲದೆ ಅವರು ಕಾಫಿ ಪುಡಿ ಮಾರಾಟ, ದೊಡ್ಡ ಜಮೀನನ್ನು ತೆಗೆದು ಸೈಟುಗಳನ್ನು ಮಾಡತಕದ್ದು ಇನ್ನೂ ಅನೇಕ ಸಾಮಾನುಗಳನ್ನು ಬ್ಲಾಕ್ ಮಾರ್ಕೆಟಿನಲ್ಲಿ ಮಾರಾಟ ಮಾಡುವುದನ್ನು ಕುರಿತು ಇಲ್ಲಿ ಚರ್ಚೆ ಮಾಡಬೇಕಾದ್ದು ದೇಶದ ಹಿತದೃಷ್ಟಿಯಿಂದ ಅಗತ್ಯ. ಆ ವ್ಯಕ್ತಿ ಎಷ್ಟೇ ದೊಡ್ಡವನಿರಲಿ, ಇಲ್ಲಿ ಚರ್ಚೆ ಮಾಡುವುದಕ್ಕೆ ಒಂದು ಅವಕಾಶವನ್ನು ಅಧ್ಯಕ್ಷರು ದಯಮಾಡಿಸಿ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಬಿಜಿನೆಸ್ ಅಡ್ವೈಜರಿ ಸಮಿತಿ ಸದಸ್ಯನಾದ್ದರಿಂದ ಇದರ ಬಗೆಗೆ ಕ್ಲಾರಿಫೈ ಮಾಡಬೇಕಾದ್ದು ನನ್ನ ಕರ್ತವ್ಯ. ಇದರಲ್ಲಿ ಯಾವುದನ್ನೂ ಮುಚ್ಚು ಮರೆ ಮಾಡಬೇಕೆಂಬ ಉದ್ದೇಶ ನನಗಿಲ್ಲ. ಇದನ್ನು ಚರ್ಚೆಗೆ ತೆಗೆದುಕೊಳ್ಳುವುದು ಬೇಡ ಎಂದು ನಾನು ಹೇಳಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಇಲ್ಲಿಗೆ ಎರಡು ವಾರಗಳ ಹಿಂಪೆಯೇ ತಮ್ಮ ಕಡೆಗೆ ಉತ್ತರ ಕರ್ನಾಟಕದಲ್ಲಿ ಖಾನಗೀ ಕಾಲೇಜಿನವರು ಅಲ್ಲಿನ ಅಧ್ಯಾಪಕರನ್ನು ಬಲಾತ್ಕಾರದಿಂದ ಕೊರಗೆ ಹಾಕುತ್ತಿದ್ದಾರೆ, ಅವರನ್ನು ಹೊಡೆಯುತ್ತಿದ್ದಾರೆಂಬ ವಿಚಾರದಲ್ಲಿ ನಾನು ಸರ್ಕಾರಕ್ಕೆ ಒಂದು ಕಾಲ್‌ಅಟೆನ್‌ಷನ್ ಮೋಷನ್ ಕಳುಹಿಸಿದ್ದೆ. ಆದರೆ ಇಲ್ಲಿಯವರೆಗೂ ವಿದ್ಯಾ ಮಂತ್ರಿಗಳಾಗಲಿ ಅಥವಾ ಸರ್ಕಾರದವರಾಗಲಿ ಯಾರೊಬ್ಬರೂ ಒಂದು ಚಕಾರ ಶಬ್ದವನ್ನೂ ಎತ್ತಿಲ್ಲ. ಇದರ ಬಗ್ಗೆ ಅಧ್ಯಕ್ಷರು ಬೇಗ ಉತ್ತರ ತರಿಸಿ ಕೊಡಬೇಕಾಗಿ ಪ್ರಾರ್ಥನೆ.

Sales at the Gundlupet Poultry Farm

ಶ್ರೀ ವಾಟಾಳ್ ನಾಗರಾಜ್.—ಸನ್ಮಾನ್ಯ ಅಧ್ಯಕ್ಷರೇ, ತಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಒಂದು ವಿಷಯ ಇದೆ. ಅದನ್ನು ನಾನೀಗ ತಮ್ಮ ಗಮನಕ್ಕೆ ತರಬಯಸುತ್ತೇನೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕೋಳಿ ಸಾಕಾಣಿಕೆ ಫಾರಂ ಇದೆಯಂತೆ ಅಲ್ಲಿ ಅವರು ಕೋಳಿಮೊಟ್ಟೆ ಒಂದಕ್ಕೆ 25 ಪೈಸೆಗಳಂತೆ ಮತ್ತು ಒಂದು ಕೋಳಿಯನ್ನು 6—7 ರೂಪಾಯಿಗೊಂದರಂತೆ ಮಾರಾಟ ಮಾಡುತ್ತಿದ್ದಾರೆ. ಈ ರೇಟ್ ಬಹಳ ದುಬಾರಿ ಆಯಿತು ಎಂದು ನನಗೆ ಅಲ್ಲಿಂದ ಒಬ್ಬರು ಪತ್ರ ಬರೆದಿದ್ದಾರೆ ಅದನ್ನು ತಮ್ಮ ಕಡೆಗೆ ಈಗ ಕಳುಹಿಸಿ ಕೊಡುತ್ತೇನೆ. ಅಲ್ಲದೆ ಅಲ್ಲಿ ಇವುಗಳು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರಾಟವಾಗುತ್ತಿವೆ ಎಂದು ಹೇಳುತ್ತಿದ್ದಾರೆ. ಈ ಪತ್ರವನ್ನು ನಾನೀಗ ತಮ್ಮ ಕಡೆಗೆ ಸರ್ಕಾರಕ್ಕೆ ಕಳುಹಿಸಲು ಕಳುಹಿಸಿಕೊಡುತ್ತಿದ್ದೇನೆ. ಮಾತನಾಡುವುದಕ್ಕೆ ಆಸ್ಪದವಿಲ್ಲ. ನಾನೇ ಇದನ್ನು ಚರ್ಚೆಮಾಡಬೇಕಾಗಿದೆ.

ಅಧ್ಯಕ್ಷರು.—ಮಾನ್ಯ ವಾಟಾಳರು ಭಾವಿಸಿರುವಷ್ಟು ನಾನು ಅನಹಾಯಕಳೇನೂ ಅಲ್ಲ. ಅಲ್ಲದೆ ಅವರು ಪ್ರಪಂಚದಲ್ಲಿರತಕ್ಕವರನ್ನೆಲ್ಲಾ ಕಾಪಾಡುತ್ತೇವೆಂದು ಅವರು ಭಾವಿಸಿದ್ದಾರೆ. ಆದೂ ಕೂಡ ಸರಿಯಲ್ಲ. ಅದನ್ನು ಯಾರೂ ನಂಬಿಯೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ತಾವು ದಯಮಾಡಿ ಇನ್ನು ಮುಂದೆ ಅಲ್ಲಿ ಕೋಳಿ ಮೊಟ್ಟೆ ಮತ್ತು ಕೋಳಿಗಳನ್ನು ಕಡಿವೆ ದರದಲ್ಲಿ ಮಾರಾಟಮಾಡುವಂತೆ ಒಂದು ಅವಕಾಶ ಕಲ್ಪಿಸಿಕೊಡ ಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.